International Journal of Kannada Research 2018; 4(1): 76-79

International Journal of Kannada Research
www.kannadajournal.com

ISSN: 2454–5813
IJKR 2018; 4(1): 76-79
© 2018 IJKR
www.kannadajournal.com
Received: 15-11-2017
Accepted: 16-12-2017

**ಯಶಸ್ವಿನಿ.ಆರ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ, ಬಂಟವಾಳ ತಾಲ್ಲೋಕು, ದಕ್ಷಿಣ ಕನ್ನಡ ಜಿಲ್ಲೆ. ಚರವಾಣಿ

**Correspondence**
**ಯಶಸ್ವಿನಿ.ಆರ್**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ, ಬಂಟವಾಳ ತಾಲ್ಲೋಕು, ದಕ್ಷಿಣ ಕನ್ನಡ ಜಿಲ್ಲೆ. ಚರವಾಣಿ

# ಬೇಂದ್ರೆಯವರ 'ಭೂಮಿತಾಯಿಯ ಚೊಚ್ಚಿಲಮಗ' (ಭಾವ–ಭಾಷಾಭಿವ್ಯಕ್ತಿಯ ನೆಲೆಯಲ್ಲಿ)

**ಯಶಸ್ವಿನಿ.ಆರ್**

ಭಾಷೆ ಭಾವವೊಂದನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸುವ ಹಂತದಲ್ಲಿ ತನ್ನ ಸುತ್ತಲಿನ ಸಮಾಜ ಹಾಗೂ ಸಂಸ್ಕೃತಿಯ ಅನೇಕ ಚಹರೆಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಮೂಲಭೂತವಾಗಿ ಧ್ವನಿ, ಪದ, ವಾಕ್ಯ, ಅರ್ಥಗಳೆಂಬ ಭಾಷಾ ಅಂಶಗಳ ಮೂಲಕ ಅನುಭವವೊಂದು ಸಾಹಿತ್ಯವಾಗುವ ಕ್ರಿಯೆಯನ್ನು ಗುರುತಿಸುತ್ತೇವೆ. ಈ ನಿಟ್ಟಿನಲ್ಲಿ ಭಾಷೆಯ ಅಭಿವ್ಯಕ್ತಿಯನ್ನು ಭಾವ–ಅನುಭವವನ್ನು ತಲುಪಿಸುವ ಬರಿಯ ಸಿದ್ಧ ಮಾಧ್ಯಮವಾಗಿ ನೋಡಲಾಗದು ಏಕೆಂದರೆ ಭಾಷಾಭಿವ್ಯಕ್ತಿಯ ಆಯ್ಕೆ ಹಾಗೂ ಸಂಯೋಜನೆ ಒಂದು ನಿರಂತರ ಸೃಜನಶೀಲ ಅನ್ವೇಷಣೆ. ಈ ಅನ್ವೇಷಣೆ ಸಂಕೀರ್ಣವಾದುದು.
ಕನ್ನಡದ ಸಂದರ್ಭದಲ್ಲಿ ಅಭಿವ್ಯಕ್ತಿಯ ವಿಚಾರದಲ್ಲಿ ಹೆಚ್ಚು ಚರ್ಚೆಗೊಳಗಾಗಿರುವ ಕವಿ ಬೇಂದ್ರೆ. ಅವರ 'ಭೂಮಿತಾಯಿಯ ಚೊಚ್ಚಿಲಮಗ' ಕವಿತೆ ಒಂದು ಸಮಾಜ–ಸಂಸ್ಕೃತಿಯ ಆಧಾರಸ್ತಂಭವಾಗಿರುವ ರೈತರ ಕುರಿತಾದದ್ದು. ಆದರೆ ರೈತನ ನಿರಂತರ ಶ್ರಮದ ಹೊರತಾಗಿಯೂ ಆತ ಎದುರಿಸುತ್ತಿರುವ ಸಂಕಷ್ಟದ ಬದುಕಿನ ಅನಾವರಣವನ್ನು ಮಾಡುತ್ತದೆ. ಈ ಕವಿತೆ ಕವಿಯ ಭಾವ–ಭಾಷೆಯ ಸಂಬಂಧದ ಸೃಜನಶೀಲ ಅನ್ವೇಷಣೆಯನ್ನು ಹೇಗೆ ಮನಗಾಣಿಸುತ್ತದೆ ಎಂಬುದನ್ನು ಕುರಿತಾಗಿರುವ ಒಂದೆರಡು ಅಭಿಪ್ರಾಯಗಳನ್ನು ಇಲ್ಲಿ ಉಲ್ಲೇಖಿಸ ಬಯಸುತ್ತೇನೆ.
ಕೆ.ವಿ.ತಿರುಮಲೇಶ್‌ರವರ ಅಭಿಪ್ರಾಯದಲ್ಲಿ "ಬೇಂದ್ರೆಯವರು ಜನಪದವನ್ನು ಹಾಗೆಯೇ ತೆಗೆದುಕೊಳ್ಳಲಿಲ್ಲ ಅದೇ ರೀತಿ ತೊಳೆಯದ, ಬಾಚದ ಶಬ್ದಗಳಿಂದಷ್ಟೇ ಅವರು ತೃಪ್ತರಾಗಲೂ ಇಲ್ಲ. ತರ್ಕದ ಹಾಗೂ ಅರ್ಥದ ಆಚೆಗಿನದನ್ನು ನೋಡುವುದಕ್ಕೆ ಅವರು ಭಾಷೆಯಷ್ಟೇ ಸಂಬಂಧಿಸಿರದೆ ಒಂದು ಸಮಗ್ರ ದೃಷ್ಟಿಕೋನಕ್ಕೂ ಸಂಬಂಧಿಸಿರುತ್ತದೆ."[೧]
ಕಿ.ರಂ.ನಾಗರಾಜರವರ ಅಭಿಪ್ರಾಯದಲ್ಲಿ "ಉನ್ನತ ಅನುಭವ ಹಾಗೂ ಭಾಷೆಯಲ್ಲಿ ಅದರ ಅಭಿವ್ಯಕ್ತಿಯ ಸಮಸ್ಯೆಯಿದೆಯೆಂದಲ್ಲ ಬೇಂದ್ರೆಯವರ ಒಟ್ಟೂ ಕಾವ್ಯದಲ್ಲಿ ಯಾವಾಗಲೂ ಕಾಡುತ್ತದೆ. ಬೇಂದ್ರೆ ಒಂದು ರೀತಿಯಲ್ಲಿ 'Haunting Poet' ನಮಗೆ ನೆಮ್ಮದಿಯನ್ನು ನೀಡುವ ಕವಿಯಲ್ಲ"[೨]
ಹೀಗೆ ಬೇಂದ್ರೆಯವರು ತಮ್ಮ ಭಾವಾಭಿವ್ಯಕ್ತಿಗಾಗಿ ಭಾಷೆಯನ್ನು ಒಗ್ಗಿಸಿಕೊಳ್ಳುವ ಕ್ರಮವನ್ನು, ಭಾಷಾ ಅಂಗಗಳಾದ ಧ್ವನಿ, ಪದ, ಅರ್ಥ, ವಾಕ್ಯಗಳ ಆಯ್ಕೆ ಹಾಗೂ ಸಂಯೋಜನೆಯ ನೆಲೆಗಳನ್ನು ಗುರುತಿಸುವುದು ಇಲ್ಲಿನ ಉದ್ದೇಶವಾಗಿದೆ.

## ಭೂಮಿತಾಯಿಯ ಚೊಚ್ಚಿಲಮಗ

೧
ಭೂಮಿತಾಯಿಯೂ
ಚೊಚ್ಚಿಲಮಗನನು
ಕಣ್ತೆರೆದೊಮ್ಮೆ
ನೋಡಿಹಿರೇನು ?

೨
ಮುಗಿಲೆಂಬವದು
ಕಿಸಿದಿತು ಹಲ್ಲು !

ಬಂದಾ ಬೆಳೆಯು
ಮಿಡಿಚಿಯ ಮೇವು;
ಬಿತ್ತಿದ್ದಾಯಿತು
ಉತ್ತಿಹ ಮಣ್ಣು !

ದಿನವೂ ಸಂಜೆಗೆ
ಬೆವರಿನ ಜಳಕ,
ಉಸಿರಿನ ಕೂಳಿಗೆ
ಕಂಬನಿ ನೀರು !
ಹೊಟ್ಟೆಯು ಹತ್ತಿತು
ಬೆನ್ನಿನ ಬೆನ್ನು !

ಎದೆಯ ಗೂಡಿನೊಳು
ಚಿಂತಿಯ ಗೂಗಿ !
ಮಿದುಳಿನ ಮೂಲೆಗೆ
ಲೊಟಲೊಟ ಹಲ್ಲಿ !
ಮೋರೆಯು ಸಾವನು
ಅಣಕಿಸುತಿಹುದು !

ಕೊರಳಿಗೆ ಹತ್ತಿದೆ
ಸಾಲದ ಶೂಲ !
ಆದರು ಬರದೋ
ಯಮನಿಗೆ ಕರುಣ
ಉಸಿರಿಗೆ ಒಮ್ಮೆ
ಜನನಾ ಮರಣಾ

೩
ನರಗಳ ನೂಲಿನ
ಪರೆಪರೆ ಚೀಲಾ
ತೆರೆತೆರೆಯಾಗಿದೆ
ಜಿರಿಜಿಯಾಗಿದೆ;
ಅದರೊಳಗೊಂದು
ಎಲುಬಿನ ಬಲೆಯು !
ಟುಕುಟುಕು ಡುಗುಡುಗು
ಉಲಿಯುವ ನರಳುವ !
ಜೀವದ ಜಂತುವು
ಹೊರಳುತ ಉರುಳುತ;
ಜನುಮವೆಂಬುವಾ
ಕತ್ತಲೆಯಲ್ಲಿ
ಬಿದ್ದಿದೆ ಒಳಗೆ
ಹೇಗೊ ಬಂದು !
ಸಾವಿನ ಬೆಳಕದು
ಕಾಣುವುದೆಂದು ?

ಎಂದೋ ಎಂದೋ
ಎಂದೋ ಎಂದು
ಕನವರಿಸುವುದು
ತಳಮಳಿಸುವುದು ! (ಭೂಮಿತಾಯಿಯ ಚೊಚ್ಚಿಲಮಗ–ಬೇಂದ್ರೆ)[೩]

ಬೇಂದ್ರೆಯವರ ಭೂಮಿತಾಯಿಯ ಚೊಚ್ಚಿಲಮಗ ಕವನದ ಹಿನ್ನೆಲೆಯಲ್ಲಿ ಭಾವ ಹಾಗೂ ಭಾಷಾಭಿವ್ಯಕ್ತಿಯನ್ನು ಕುರಿತಾದ ನನ್ನ ಗ್ರಹಿಕೆಗಳು ಇಂತಿವೆ.

**ಧ್ವನಿ ಸಂಯೋಜನೆಯ ನೆಲೆ**

ಭಾಷಾಭಿವ್ಯಕ್ತಿಯಲ್ಲಿ ಧ್ವನಿಸಂಯೋಜನೆ ಸೌಂದರ್ಯಾನುಭೂತಿ ಹಾಗೂ ಅರ್ಥಸಂವಹನಗಳೆರಡನ್ನೂ ಪ್ರಭಾವಿಸಬಲ್ಲವು.

ಅ) ಪದ್ಯದಲ್ಲಿನ ಧ್ವನಿಗಳ ವಿಶಿಷ್ಟ ಸಂಯೋಜನೆ ಧೀರ್ಘಾಕ್ಷರಗಳ ಬಳಕೆ–ಅವಧಾರಣೆ ಹಾಗೂ ಹೆಚ್ಚು ಗಮನ ಸೆಳೆಯುವ ಕ್ರಮ.

ಭೂಮಿತಾಯಿಯಾ(ಆ), ಬಂದಾ(ಆ), ಜನನಾ(ಆ), ಮರಣಾ(ಆ), ಜನುಮವೆಂಬುವಾ(ಆ)–ಇಂತಹ ಧೀರ್ಘಾಕ್ಷರಾಂತ್ಯ ಪದಗಳು ಸಾಮಾಜಿಕ ಸಂದರ್ಭದಲ್ಲಿ ನಿರ್ಲಕ್ಷಿತವಾದ ಸಂಗತಿಯ ಸೂಚನೆಯನ್ನು ನಮಗೆ ನೀಡುವ ಜೊತೆಯಲ್ಲಿಯೇ, ಆ ಅನುಭವವನ್ನು ಓದುಗರು ಎದುರುಗೊಳ್ಳುವಂತೆ ಮಾಡಿವೆ, ಇಲ್ಲಿ ಸೂಚನೆಯೊಂದು ಅವಧಾರಣೆಯನ್ನು ಬಯಸುವುದು ಗಮನ ಸೆಳೆಯುತ್ತದೆ.

**ಆ) ಪದ್ಯ ಘಟಕದ 'ಉ' ಕಾರಾಂತ ಪದಸರಣಿ:**

(ಗತಿಸಿಹೋದ ಕಾಲ ಹಾಗೂ ವರ್ತಮಾನದ ಮುಖಾಮುಖಿ)
ಮುಗಿಲೆಂಬುವದು(ಉ)
ಕಿಸಿದಿತು ಹಲ್ಲು (ಉ)
ಬಂದಾ ಬೆಳೆಯು(ಉ)
ಮಿಡಿಚಿಯ ಮೇವು(ಉ)
ಬಿತ್ತಿದ್ದಾಯಿತು(ಉ)
ಉತ್ತಹ ಮಣ್ಣು(ಉ)

ಇಲ್ಲಿ ಬರುವ 'ಉ' ಕಾರಾಂತಗಳು ಭೂತಕಾಲ ಪ್ರತ್ಯಯ ಸೂಚಿಗಳು ಹಾಗೂ ಇವು ಈಗಾಗಲೇ ಗತಿಸಿಹೋದ ಸಂಗತಿಗಳಿಗೆ ಸಂಬಂಧಿಸಿದವು. ಇಲ್ಲಿನ ಭಾವದ ನಡೆ ಈ ಚೊಚ್ಚಿಲಮಗನ ಸ್ಥಿತಿಯನ್ನು ಗತಿಸಿಹೋದ ಕಾಲ ಹಾಗೂ ವರ್ತಮಾನದ ಸಂಬಂಧದಲ್ಲಿ ಚಿತ್ರಿಸುವ ಅಭಿವ್ಯಕ್ತಿಯ ಆಯ್ಕೆಯಾಗಿವೆ.

ಇ) ಚೊಚ್ಚಿಲಮಗನ ದೈಹಿಕ ಹಾಗೂ ಮಾನಸಿಕ ಸ್ಥಿತಿಚಿತ್ರ–ಸ್ವನಗಳ ಸಂಯೋಜನೆಯ ಪರಿಣಾಮಕಾರಿತ್ವ

'ಮಿದಿಳಿನ ಮೂಲೆಗೆ ಲೊಟಲೊಟಹಲ್ಲಿ
ಟುಕುಟುಕು ಡುಗುಡಗು–ಜೀವದ ಜಂತು'

ಇಲ್ಲಿ ಲ–ಟ, ಟ–ಕ, ಡ–ಗ ಸ್ವನಸಂಯೋಜನೆ ಜೀವವೊಂದರ ಅವಸ್ಥೆಯನ್ನು ಚಲನಶೀಲವಾಗಿ ದಾಖಲಿಸುವ ರೀತಿ ಗಮನಸೆಳೆಯುತ್ತದೆ. ಲೊಟಲೊಟ, ಟುಕುಟುಕು, ಡುಗುಡುಗು ಶಬ್ದಗಳು ರೈತನ ಜೀವದ ಅವಸ್ಥೆಯನ್ನು ಅದರ ನಿಕೃಷ್ಟ ಸ್ಥಿತಿಯಲ್ಲೇ ದಾಖಲಿಸುವ ಸ್ವನಗಳ ಮೂಲಕ ಪರಿಣಾಮಕಾರಿಯಾಗಿಸಿವೆ.

ಈ) ಸ್ವನಗಳ ಪುನರಾವರ್ತನೆ ಹೊಮ್ಮಿಸುವ ಭಾವತರಂಗ

ನರಗಳ ನೂಲಿನ
ಪರೆಪರೆ ಚೀಲಾ
ತೆರೆತೆರೆಯಾಗಿದೆ

ಜಿರಿಜಿರಿಯಾಗಿದೆ

ಮೇಲಿನ ಘಟಕದಲ್ಲಿ ಪುನರಾವರ್ತನೆಯಾಗುತ್ತಿರುವ ನ, ಪ, ರ, ಜ ಸ್ವನಗಳು –ಚೊಚ್ಚಿಲಮಗನ ದೇಹಸ್ಥಿತಿ ಹೇಗೆ ಜಾಳುಜಾಳಾಗಿ ಚದುರಿಹೋಗಿದೆ ಅಲ್ಲಿ ಒಂದು ಘನ ಸ್ಥಿತಿ ಅಂದರೆ ಸದೃಢತೆ ಹೇಗೆ ಇಲ್ಲವಾಗಿದೆ ಎಂಬುದರ ಚಿತ್ರ ಕಣ್ಮುಂದೆ ಬರುವಂತೆ ಮಾಡಿವೆಯೆನ್ನಬಹುದು.
ಉ) ಸಾವಿನ ಉತ್ಕಟ ನಿರೀಕ್ಷೆ–ಸ್ವರಗಳು ಹೊಮ್ಮಿಸುರುವ ಧ್ವನಿ

ಸಾವಿನ ಬೆಳಕದು
ಕಾಣುವುದೆಂದು ?
ಎಂದೋ ಎಂದೋ
ಎಂದೋ ಎಂದು

ಈ ಮೇಲಿನ ಪದ್ಯ ಘಟಕದಲ್ಲಿ ‘ಎಂದೋ.....( ‘ಓ’ ಸ್ವರಾಂತ್ಯ) ನಿರೀಕ್ಷೆಯ (ಸಾವಿನ ಬೆಳಕಿಗಾಗಿ) ನಿರಂತರತೆಯನ್ನೂ; ‘ಎಂದು’ (‘ಉ’ ಸ್ವರಾಂತ್ಯ) ನಿರೀಕ್ಷೆಯಲ್ಲಿ ಸೋತ ತಣ್ಣನೆಯ ಧ್ವನಿಯನ್ನು ಹೊಮ್ಮಿಸಿವೆ.

**ಪದ, ವಾಕ್ಯ, ಅರ್ಥದ ನೆಲೆ:**
(ದುರಂತ ಚಿತ್ರವನ್ನು ವಿಸ್ತರಿಸುವ ರೂಪಕಗಳು–ಪ್ರತಿಮೆಯ ದಾರಿ)

**ಪದಗಳ ನಡುವಿನ ಸಾವಯವ ಸಂಬಂಧ**.
ಆಳವಾದ ಅರ್ಥಸಾಧ್ಯತೆಗಾಗಿ ಪದಗಳನ್ನು ಬೆಸೆಯುವ ಕ್ರಮ ಅನನ್ಯವಾದುದು.
ಅ) ಭೂಮಿತಾಯಿ – ಭೂಮಿ ಎಂಬ ಅನನ್ಯ ಪ್ರಾಕೃತಿಕ ನೆಲೆಯನ್ನು ಮನುಷ್ಯ ಸಂಬಂಧಗಳಲ್ಲಿ ಅಮೂಲ್ಯವಾದ ತಾಯಿಯೊಂದಿಗೆ ಬೆಸೆದು ಒಂದು ಭಾವನಾತ್ಮಕ ನೆಲೆಯ ರೂಪಕ ಸೃಷ್ಟಿಯಾಗಿದೆ. ಇದು ಭಾರತೀಯ ಸಂಸ್ಕೃತಿಯ ಆಪ್ತ ಪರಿಕಲ್ಪನೆಯಾದರೂ ವಿಮರ್ಶಾತ್ಮಕವಾಗಿ ವಿಸ್ತರಿಸಬಲ್ಲದು.
ಆ) ಭೂಮಿತಾಯಿಯ ಚೊಚ್ಚಿಲಮಗ– ಭೂಮಿತಾಯಿಯಾದರೆ ಆಕೆಯ ‘ಚೊಚ್ಚಿಲಮಗ ಭೂಮಿಯ ಒಡಲನ್ನೇ ನೆಚ್ಚಿ ಬದುಕು ರೂಪಿಸಿಕೊಂಡಿರುವ ರೈತ. ನಮ್ಮ ಸಂಸ್ಕೃತಿಯೂ, ಕುಟುಂಬ ವ್ಯವಸ್ಥೆಯೂ ಚೊಚ್ಚಿಲಮಗನಿಗೆ ಹೊರಿಸಿರುವ ಸ್ಥಾನ ಹೆಚ್ಚಿನ ಜವಾಬ್ದಾರಿಯುಳ್ಳದ್ದು ಅನ್ನದಾತನಿಲ್ಲದೆ ಯಾವುದೇ ಅಭಿವೃದ್ದಿಯನ್ನು ಊಹಿಸಿಕೊಳ್ಳಲಾಗದು; ಆದರೆ ಆತನ ಶ್ರಮದ ಬದುಕನ್ನೂ, ನೋವನ್ನೂ ಅರಿತಿರದ ಮನಃಸ್ಥಿತಿಗಳಿಗೊಂದು ಪ್ರಶ್ನೆ ‘ಕಣ್ತೆರೆದೊಮ್ಮೆ ನೋಡಿಹಿರೇನು?’

- ಪ್ರಕೃತಿ – ಮನುಷ್ಯನ ನಿರಂತರ ನಂಟನ್ನು ಕುರಿತು ಕವಿ ಸೃಷ್ಟಿಸಿರುವ ರೂಪಕಗಳು – ದುರಂತ ಚಿತ್ರದ ವಿಸ್ತರಣೆ

ಮುಗಿಲೆಂಬುವದು – ಕಿಸಿದಿತು ಹಲ್ಲು
ಬಂದಾಬೆಳೆಯು – ಮಿಡಿಚಿಯ ಮೇವು
ಬಿತ್ತದ್ದಾಯಿತು – ಉತ್ತಿಹ ಮಣ್ಣು
ದಿನವೂ ಸಂಜೆಗೆ – ಬೆವರಿನ ಜಳಕ
ಉಸಿರಿನ ಕೂಳಿಗೆ – ಕಂಬನಿ ನೀರು
ಹೊಟ್ಟೆಯು ಹತ್ತಿತು –ಬೆನ್ನಿನ್ನ ಬೆನ್ನು

‘ಮುಗಿಲು’ ಎಂಬ ಪ್ರಕೃತಿಯ ಅಂಶಕ್ಕೆ ವ್ಯಕ್ತಿತ್ವವನ್ನು ಆರೋಪಿಸಿ ‘ಹಲ್ಲು ಕಿಸಿದಿದೆ’ ಎಂದಿರುವುದು ವ್ಯಂಗ್ಯ, ಅಸಹಾಯಕ ಧ್ವನಿ ಹೊರಡಿಸಿದೆ.

ಪ್ರಕೃತಿಯೂ ಸಹಕರಿಸಿದೆ ಬಂದ ಬೆಳೆ ‘ಮಿಡಿಚಿಯಂತಹ’ ಪುಟ್ಟದ ಜೀವದ ಮೇವಾಗಿದೆ; ಅನ್ನದಾತನಿಗೆ ಆಸರೆಯಾಗದೆ ಹೋಗಿದೆ. ಬಿತ್ತಿದರೂ ಉತ್ತಿಹ ಮಣ್ಣೊಂದೇ ಕಾಣುವುದೇ ನಿರಾಶೆಯ ಪ್ರತೀಕ. ಶ್ರಮದ ಬದುಕಿಗೆ ಬೆವರೇ ಜಳಕವಾಗಿದೆ.
ಉಸಿರಿನ ಕೂಳು ಬೇಯಿಸುಲು(ಉಸಿರಿನ ಅಂತ್ಯವೇ?) ಕಂಬನಿ ನೀರಾಗಿದೆ. ಹೀಗೆ ರೈತನ ಶ್ರಮ ನಿರಂತರವಾಗಿದ್ದರೂ ನಿರರ್ಥಕವಾಗಿದೆ ಎಂಬ ಶಬ್ದಚಿತ್ರ ಪ್ರತಿಮೆಯ ದಾರಿಯಾಗುತ್ತದೆ.

➢ ಓದುಗರ ಸಂವೇದನೆಗಳಿಗೆ ಹೆಚ್ಚಿನ ಕೆಲಸ ಕೊಡುವ ಭಾವತೀವ್ರತೆಯ ಪದಸರಣೆ

✓ ಮೋರೆಯು ಸಾವನು ಅಣಕಿಸುತಿಹುದು –‘ಸಾವು’ ಎಂಬ ಕಟುವಾಸ್ತವವೇ ಎಂತಹವರ ಎದೆಯನ್ನೂ ನಡುಗಿಸುತ್ತದೆ ಅಂತಹುದರಲ್ಲಿ ಸಾವನ್ನೇ ಅಣಕಿಸುವ ಮೋರೆ ಹೇಗಿರಬಹುದು ಇನ್ನೆಂತಹ ನೋವನ್ನು ಹೊತ್ತಿರಬಹುದು ಎಂಬ ಊಹೆಯೇ ತೀವ್ರವಾದ ಸಂವೇದನೆಗಳನ್ನು ಬಯಸುವಂತಹುದು, ಸಾವು ತರುವ ಭೀಕರ ನೋವಿಗಿಂತ ಹೆಚ್ಚಿನ ನೋವು ಹೊತ್ತಿರುವ ಮೋರೆಯೆಂಬ ನಿರ್ಧಾರಕ ಧ್ವನಿಯೊಂಬ ನಿರ್ಧಾರಕ ಧ್ವನಿಯೊಂದು ಪದಸರಣಿಯಿಂದ ಹೊಮ್ಮಿದೆ.

✓ ಹೊಟ್ಟೆಯು ಹತ್ತಿತು ಬೆನ್ನಿನ ಬೆನ್ನು –ಬೆನ್ನನ್ನು ಅಂಟಿರುವ ಹೊಟ್ಟೆಯೇ ಅತಿ ಅಸಹನೀಯ ಸ್ಥಿತಿಯ ಸೂಚಕ. ಅಂತಹುದರಲ್ಲಿ ಬೆನ್ನಿನ ಬೆನ್ನಿಗೇ ಅಂಟಿದ ಹೊಟ್ಟೆ ಭಾವತೀವ್ರತೆಯ ಓಟಕ್ಕೆ ಭಾಷೆಯನ್ನೂ ಒಗ್ಗಿಸುವ ಪರಿ ಅನನ್ಯವಾದುದು.

- **ಪದಜೋಡಣೆ ಹಾಗೂ ಸಾಂಸ್ಕೃತಿಕ ಸಂದರ್ಭ**

➢ ಎದೆಯ ಗೂಡಿನೊಳು ಚಿಂತೆಯ ಗೂಗಿ
➢ ಮಿದುಳಿನ ಮೂಲೆಗೆ ಲೊಟಲೊಟ ಹಲ್ಲಿ

ಇಲ್ಲಿ ಬಳಕೆಯಾಗಿರುವ ‘ಗೂಗಿ’, ‘ಹಲ್ಲಿ’ – ಜೀವಿಗಳಿಗೆ ನಮ್ಮ ಸಮಾಜ–ಸಂಸ್ಕೃತಿಯ ಹಿನ್ನೆಲೆಯಲ್ಲಿ ಒಳಿತಿನೊಂದಿಗಿನ ಜೋಡಣೆ ಕಡಿಮೆ. ಇವು ಮನುಷ್ಯನ ಮನಸ್ಸಿನ ನೀರವತೆಯನ್ನು ಕಲಕಿ ಚಿಂತೆ, ಆತಂಕಕ್ಕೆ ದೂಡುವಂತಹವು ಎಂಬ ದೃಷ್ಟಿಯಿದೆ ಇಂತಹ ಸಂಕೇತಗಳನ್ನು ಚೊಚ್ಚಿಲಮಗನ ದೈಹಿಕ ಹಾಗೂ ಮಾನಸಿಕ ಸ್ಥಿತಿಯೊಂದಿಗೆ ಜೋಡಿಸಲಾಗಿದೆ.

- **ವೈರುಧ್ಯಗಳ ಸಂಯೋಜನೆ**

➢ ಜನುಮವೆಂಬುವಾ ಕತ್ತಲೆ
➢ ಸಾವಿನ ಬೆಳಕು

‘ಜನುಮ–ಸಾವು’, ‘ಕತ್ತಲೆ–ಬೆಳಕು’ –ಈ ವೈರುಧ್ಯಗಳನ್ನು ಅರ್ಥಸಾಧನೆಗಾಗಿ ಸಂಯೋಜಿಸಿರುವುದನ್ನು ಗಮನಿಸಬೇಕು. ಇವು ಪದ್ಯದ ಸಂದರ್ಭದ ಹಿನ್ನೆಲೆಯಲ್ಲಿಯೇ ನಮ್ಮ ಗ್ರಹಿಕೆಗೆ ನಿಲುಕುವಂತಹವು. ಜನುಮ ಎಂಬ ಬಹುತೇಕ ಸಂಭ್ರಮದ ಕ್ಷಣವನ್ನು ಬೆಳಕಿಗೂ ಬೆಸೆದು ತೋರುವುದೊಂದು ನಿರ್ಣಾಯಕವಾದ ಮನಃಸ್ಥಿತಿ, ವೈರುಧ್ಯಗಳು ಭಾಷೆಯೊಂದಿಗೆ ಹೇಗೆ ರೂಪುಗೊಂಡಿವೆ ಎಂಬುದು ಗಮನಾರ್ಹ ಸಂಗತಿ.
ಹೀಗೆ ಅಭಿವ್ಯಕ್ತಿಯೊಂದು ಭಾವದೊಂದಿಗೆ ತೀವ್ರವಾಗಿ

ಹೊಂದಿಕೊಳ್ಳುವಂತೆ ಮಾಡಬಲ್ಲ ಕವಿ ಬೇಂದ್ರೆಯವರು ಈ ಹಿನ್ನೆಲೆಯಲ್ಲಿ ಅವರ ಪಾಲಿಗೆ ಭಾಷೆಯೆಂಬುದು ಬರಿಯ ಸಿದ್ದಸಾಧನವಲ್ಲ, ಭಾವನೆಯ ಸಜೀವತೆಯ ದಾಖಲಿನ ರೂಪವೆಂಬುದು ಸ್ಪಷ್ಟವಾಗುತ್ತದೆ. ಬದುಕಿನ ಅನುಭವದ ಚಲನಶೀಲತೆಗೆ ಕುಂದುಬಾರದ ಹಾಗೆ ಭಾಷೆಯಲ್ಲಿ ದಾಖಲಿಸಬಲ್ಲ ಶಕ್ತಿ, ಭಾವ–ಭಾಷೆಯನ್ನು ಮನೋಜ್ಞವಾಗಿ ಬೆಸೆಯುವ ಕ್ರಮ ಬೇಂದ್ರೆಯವರ ಈ ಕವನದಲ್ಲಿ ಕಂಡುಬಂದಿದೆ.

**ಅಡಿ ಟಿಪ್ಪಣಿ:**

1. ಬೇಂದ್ರೆಯವರ ಕಾವ್ಯಶೈಲಿ, ಪುಟ ಸಂಖ್ಯೆ –೧೫
2. ಕಿ.ರಂ.ನಾಗರಾಜ ಉಪನ್ಯಾಸಗಳು, ಮತ್ತೆ ಮತ್ತೆ ಬೇಂದ್ರೆ, ಸಂ. ಅಕ್ಷತಾ.ಕೆ. ಪುಟ ಸಂಖ್ಯೆ–೫೨,೫೩.
3. ಭೂಮಿತಾಯಿಯ ಚೊಚ್ಚಿಲಮಗ, ನಾದಲೀಲೆ–ದ.ರಾ.ಬೇಂದ್ರೆ, ಸಂ. ವಾಮನಬೇಂದ್ರೆ

**ಗ್ರಂಥ ಋಣ:**


1. ಕೆ.ವಿ.ತಿರುಮಲೇಶ, ೧೯೮೭, ಬೇಂದ್ರೆಯವರ ಕಾವ್ಯಶೈಲಿ, ಕ್ರೈಸ್ಟ್ ಕಾಲೇಜು, ಕನ್ನಡ ಸಂಘ, ಬೆಂಗಳೂರು, ೧೯೮೭.
2. ಅಕ್ಷತಾ.ಕೆ (ಸಂ), ೨೦೧೦, ಕಿ.ರಂ.ನಾಗರಾಜ ಉಪನ್ಯಾಸಗಳು, ಮತ್ತೆ ಮತ್ತೆ ಬೇಂದ್ರೆ, ಅಹರ್ನಿಶಿ ಪ್ರಕಾಶನ, ಶಿವಮೊಗ್ಗ, ೨೦೧೦.
3. ಡಾ.ವಾಮನಬೇಂದ್ರೆ (ಸಂ), ೧೯೩೮, ಅಂಬಿಕಾತನಯದತ್ತರ ನಾದಲೀಲೆ, ಶ್ರೀಮಾತಾ ಪ್ರಕಾಶನ, ಹುಬ್ಬಳ್ಳಿ, ೧೯೩೮.
4. Susana Onega, Structuralisum And Narative Poetics, Literary And Criticisum, Patricia Waugh, An Oxford Guide, Oxford University Press, Dehli, 2006.